ಕೊಡಬೇಕಾಗಿ ಒತ್ತಾಯಿಸುತ್ತೇನೆ. ಹಾಗೂ ತೋಟಗಾರಿಕೆ ಇಲಾಖೆಗೆ ಇಲ್ಲಿ ಸಸಿ ನಿರ್ಮಾಣ ಕೇಂದ್ರವನ್ನು ಸ್ಥಾಪಿಸುವಂತೆ ಸರ್ಕಾರ ಆದೇಶ ನೀಡುವಂತೆ ಗಮನವನ್ನು ಸೆಳೆಯುತ್ತೇನೆ ಎಂದುವೇಳೆ ಇದು ಸಾಧ್ಯವಾಗದೇ ಹೋದಲ್ಲಿ ಖಾಲಿ ಉಳಿಯುವ ಈ ಸ್ಥಳವನ್ನು ಪ್ರವಾಸೋದ್ಯಮ ನಿಗಮಕ್ಕೆ ಕೊಟ್ಟು ಉತ್ತರ ಕರ್ನಾಟಕದಲ್ಲಿ ಒಂದು ಚಿಕ್ಕ ಬೃಂದಾವನ ಮಾಡುವಂತೆ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಈ ವಿಷಯದಲ್ಲಿ ಲೋಕೋಪಯೋಗಿ ಮಂತ್ರಿಗಳು ಸದನದಲ್ಲಿಹೇಳಿಕೆ ನೀಡುವಂತೆ ಆಗ್ರಹ ಪಡಿಸುತ್ತೇನೆ

ಶ್ರೀ ಕೆ. ಕೃಷ್ಣಮೂರ್ತಿ (ಸಣ್ಣ ಪಂತ್ತು ಏತ ನೀರಾವರಿ ಸಚಿವರು).— ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆ, ಹಂಕ್ಕೇರಿ ತಾಲ್ಲೂಕಿನ ಸಂಕೇಶ್ವರ ಮಂತ ಕ್ಷೇತ್ರದ ಬೈರಾಪುರ ಸಣ್ಣ ನೀರಾವರಿ ಯೋಜನೆಯು ಜಾಗತಿಕ ಬ್ಯಾಂಕಿನ ನೆರವಿನ ಅಡಿಯಲ್ಲಿ ೭೫ ಲಕ್ಷ ರೂಪಾಯಿಗಳಿಗೆ ಸರ್ಕಾರ ಆದೇಶಪತ್ರ ಪಿಡಬ್ಲ್ಯೂಡಿ ೨೨ ಐಎಫ್‌ವೈ ೮೨ ದಿನಾಂಕ ೩೧-೧೨-೮೨ರಲ್ಲಿ ಆಡಳಿತಾತ್ಮಕ ಮಂಜೂರಾತಿ ಹೊಂದಿದ್ದು ದಿನಾಂಕ ೧೦-೨-೮೩ರಲ್ಲಿ ತಾಂತ್ರಿಕ ಮಂಜೂರಾತಿ ಹೊಂದಿದೆ. ಈ ಯೋಜನೆಯ ಉದ್ದೇಶಿತ ಅಚ್ಚುಕಟ್ಟು ಪ್ರದೇಶ ೪೬೦ ಹೆಕ್ಟೇರ್‌ಗಳು. ಈ ಯೋಜನೆಯ ಕಾಮಗಾರಿಗಳನ್ನು ಎಲ್.ಸಿ.ಬಿ. ಗುತ್ತಿಗೆ ಆಧಾರದ ಮೇರೆಗೆ ನವೆಂಬರ್ ೧೯೮೪ರಲ್ಲಿ ಪ್ರಾರಂಭಿಸಲಾಗಿದೆ, ಇದುವರೆವಿಗೂ ಸುಮಾರು ೬೪.೧೪ ಲಕ್ಷ ರೂಪಾಯಿಗಳು ಖರ್ಚಾಗಿದ್ದು, ಯೋಜನೆಯು ಮುಗಿಯುವ ಹಂತದಲ್ಲಿದೆ. ಈ ಯೋಜನೆಯ ಕೆಲಸಗಳ ಪ್ರಗತಿ ಈ ಕೆಳಕಂಡಂತಿದೆ.

೧) ಏರಿಯ ಎಡ ಮತ್ತು ಬಲ ದಂಡೆಗಳು ಪೂರ್ಣಗೊಂಡಿವೆ. ಹಳ್ಳದ ಭಾಗದಲ್ಲಿ ಆರ್.ಎಲ್. ೨೬.೪ ಮೀ ಎತ್ತರದವರೆಗೆ ಮುಗಿದಿದ್ದು ಗರಿಷ್ಠ ಮಟ್ಟಕ್ಕೆ ಇನ್ನೂ ಸುಮಾರು ೫,೮೦ಮೀ ಎತ್ತರದವರೆಗೆ ಇದ್ದು ಕೆಲಸ ಪ್ರಗತಿಯಲ್ಲಿದೆ.

೨) ಕೋಡಿ, ಸ್ಪಿಲ್ಲಿಂಗ ಬೇಸಿನ್ ಮತ್ತು ಟೀಲ್‌ಚಾನಲ್ ಕೆಲಸಗಳು ಪೂರ್ಣಗೊಂಡಿವೆ.

೩) ೨ ತೂಬುಗಳ ಕೆಲಸ ಬಹುತೇಕ ಪೂರ್ಣಗೊಂಡಿದೆ.

೪) ಎಡದಂಡೆ ಕಾಲುವೆ ಮತ್ತು ಬಲದಂಡೆ ಕಾಲುವೆಗಳು ತಲಾ ೩,೦೦೦ ಮೀಟರುಗಳ ಉದ್ದದವರೆಗೆ ಪೂರ್ಣಗೊಂಡಿದೆ. ಎಡದಂಡೆ ಕಾಲುವೆಯ ೩೦೦೦ ಮೀಟರ್‌ನಿಂದ ೫೧೨೦ ಮೀಟರ್‌ಗಳವರೆಗೆ, ಬಲದಂಡೆ ಕಾಲುವೆಯ ೩೦೦೦ ಮೀಟರ್‌ನಿಂದ ೩೮೮೦ ಮೀಟರ್‌ವರೆಗೆ ನಿರ್ಮಿಸಲಂ ಗುತ್ತಿಗೆದಾರರಿಗೆ ಒಪ್ಪಿಸಿದ್ದು ಕೆಲಸ ಪ್ರಗತಿಯಲ್ಲಿದೆ. ಈ ಯೋಜನೆಯಲ್ಲಿಯ ಎಲ್ಲಾ ಉಳಿಕೆ ಕೆಲಸಗಳನ್ನು ೧೯೮೫ ಡಿಸೆಂಬರ್ ಅಂತ್ಯದಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

೫) ಈಗಾಗಲೇ ೨೫೯ ಹೆಕ್ಟೇರು ಪ್ರದೇಶವನ್ನು ನೀರಾವರಿಗಾಗಿ ಘೋಷಿಸಲಾಗಿದೆ.

ಈ ಯೋಜನೆಗೆ ಬೇಕಾಗುವ ಭೂಮಿಯನ್ನು ಮಾತ್ರ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದೂ ಮತ್ತು ಮಾನ್ಯ ಸದಸ್ಯರು ಸೂಚಿಸಿರುವಂತೆ ಏರಿಯ ಪೂರ್ವಭಾಗದಲ್ಲಿ ಯಾವ ಜಮೀನು ಖಾಲಿ ಇಲ್ಲವೆಂದೂ ತಿಳಿದುಬಂದಿದೆ. ಆದಾಗ್ಯೂ ಈ ಯೋಜನೆ ಸಂಪೂರ್ಣವಾಗಿ ಮುಗಿದ ನಂತರ ಹೆಚ್ಚುವರಿ ಜಮೀನು ಉಳಿದರೆ ಅದನ್ನು ತೋಟಗಾರಿಕೆ ಇಲಾಖೆಗೆ ಅಥವಾ ಪ್ರವಾಸೋದ್ಯಮ ನಿಗಮಕ್ಕೆ ಕೊಡುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

5. ಶ್ರೀ ರಾಮು ಖಾಸಗಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ವಿಟ್ಠಲ್‌ಶೆಟ್ಟಿಯವರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಕುರಿತಂ.

ಶ್ರೀ ಬಸವರಾಜ್ (ಬ್ರಹ್ಮಾವರ).— ಮಾನ್ಯ ಅಧ್ಯಕ್ಷರೇ, ಶ್ರೀ ಎಂ. ವಿಠಲಶೆಟ್ಟಿ ಎಂಬುವರು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಉತ್ತರ ಪಲಯದ ಬೈದೆ ಬೆಟ್ಟು ಶ್ರೀರಾಮ ಖಾಸಗಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಕೆಲಸ ಮಾಡುತ್ತಿದ್ದು, ಕಾರಣಾಂತರದಿಂದ ೧೩-೩-೧೯೮೬ ರಿಂದ ಶಾಲೆಯ ಆಡಳಿತ ಮಂಡಲಿಯವರು ಅವರನ್ನು ಅಮಾನತ್ತಿನಲ್ಲಿ ಇರಿಸಿದ್ದನ್ನು ಸದರಿ ವಿಠಲ ಶೆಟ್ಟಿಯವರು ಈ ರೀತಿ ಅಮಾನತ್ತಿನಲ್ಲಿಟ್ಟಿರುವುದನ್ನು ಉಚ್ಚ ನ್ಯಾಯಾಲಯಕ್ಕೆ ಒಯ್ದಿದ್ದು. ಉಚ್ಚ ನ್ಯಾಯಾಲಯ ಡಬ್ಲ್ಯೂ. ಪಿ, ಸಂಖ್ಯೆ ೪೮೩೬-೪೬,

ದಿನಾಂಕ ೭-೭-೮೭ರ ಆದೇಶದಂತೆ ಅವರನ್ನು ಮುಖ್ಯೋಪಾಧ್ಯಾಯರನ್ನಾಗಿ ತೆಗೆದುಕೊಳ್ಳುವಂತೆಯೂ, ಅವರ ವೇತನವನ್ನು ಪಾವತಿ ಮಾಡುವಂತೆಯೂ ಆದೇಶ ನೀಡಿದ್ದಾಗ್ಯೂ, ಅವರನ್ನು ಕೆಲಸದ ಮೇಲೆ ತೆಗೆದುಕೊಳ್ಳಲಿಲ್ಲ. ಹಾಗೂ ವೇತನವನ್ನೂ ಕೊಡಲಿಲ್ಲ. ಸದರಿ ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಶಾಲೆಯ ಆಡಳಿತ ಮಂಡಲಿಯವರು ವಿಮರ್ಶಾ ಅರ್ಜಿಯನ್ನು ಸಲ್ಲಿಸಿದ್ದು. ಅದೂ ಕೂಡ ೨೪-೯-೮೭ ರಂದು ತಳ್ಳಿ ಹಾಕಲ್ಪಟ್ಟಿತು. ಈ ತೀರ್ಪಿನ ಬಗ್ಗೆ ಶಾಲೆಯ ಆಡಳಿತ ಮಂಡಲಿಯವರು ವಿಶೇಷ ಪರಿಶೀಲನಾ ಅರ್ಜಿಯನ್ನು ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದು. ೧೫-೨-೮೮ರಂದು ಅಲ್ಲಿಂದಲೂ ಸದರಿ ಪರಿಶೀಲನಾ ಅರ್ಜಿಯನ್ನು ತಳ್ಳಿಹಾಕಲಾಯಿತು ಹಾಗೂ ಸದರಿ ವಿಠಲ ಶೆಟ್ಟಿಯವರನ್ನು ಕೆಲಸದ ಮೇಲೆ ತೆಗೆದುಕೊಳ್ಳುವಂತೆಯೂ ಅವರೇ ಶಾಲೆಯ ಇತರ ಉಪಾಧ್ಯಾಯರ ವೇತನ ಬಿಲ್ಲುಗಳನ್ನು ತಯಾರು ಮಾಡುವಂತೆಯೂ ಆದೇಶ ನೀಡಿದ್ದಾಗ್ಯೂ ಇದಕ್ಕನುಗುಣವಾಗಿ ಉಡುಪಿಯ ಸಹಾಯಕ ವಿದ್ಯಾಧಿಕಾರಿಗಳು ಮೇಲ್ಕಂಡ ಶಾಲೆಯ ಸಂಚಾಲಕಿಯವರಿಗೆ ಪತ್ರ ಬರೆದಿದ್ದು. ಶ್ರೀ ವಿಠಲಶೆಟ್ಟಿಯವರನ್ನು ಕೂಡಲೇ ಕೆಲಸದ ಮೇಲೆ ತೆಗೆದುಕೊಂಡು ಆ ಬಗ್ಗೆ ವರದಿಯನ್ನು ಕಳುಹಿಸಬೇಕೆಂದು ತಿಳಿಸಿದ್ದಾಗ್ಯೂ, ಈವರೆಗೂ ಅವರನ್ನು ಕೆಲಸದ ಮೇಲೆ ತೆಗೆದುಕೊಳ್ಳದಿರುವುದರಿಂದ ಸರ್ಕಾರದವರು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಶ್ರೀ ವಿಠಲಶೆಟ್ಟಿ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವಂತೆ ಹಾಗೂ ಅವರಿಗೆ ಇದುವರೆಗೆ ಬರಬೇಕಾದ ವೇತನವನ್ನು ಕೊಡಿಸುವಂತೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಖಾತೆಯ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ವಿಚಾರಣೆ ಮಾಡಿ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇನೆ.

6. ಪುತ್ತೂರಿನಲ್ಲಿ ಅಗ್ನಿಶಾಮಕ ದಳವನ್ನು ಸ್ಥಾಪಿಸುವುದು.

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡದ ಪುತ್ತೂರು ವಿಭಾಗದ ಸುಳ್ಯ ಬೆಳ್ತಂಗಡಿ, ಕಡಬ, ವಿಟ್ಲ ಈ ಪ್ರದೇಶಗಳು ಕೃಷಿ ಹಾಗೂ ಕೈಗಾರಿಕಾ ರಂಗದಲ್ಲಿ ಮುಂದೆ ಬರುವ ಪ್ರದೇಶಗಳಾಗಿವೆ. ಪುತ್ತೂರು ವಿಭಾಗದಲ್ಲಿ ಅನಿರೀಕ್ಷಿತವಾಗಿ ಬೆಂಕಿ ಅಪಘಾತವಾದರೆ ಅಗ್ನಿಶಾಮಕ ದಳದಿಂದ ನೆರವನ್ನು ಪಡೆಯಬೇಕೆಂದರೆ ಮಂಗಳೂರಿಗೆ ಸಂಪರ್ಕಿಸುವುದರ ಅವಕಾಶವಿರುತ್ತದೆ. ಮಂಗಳೂರಿನಿಂದ ಸುಳ್ಯ ಅಥವಾ ಕಡಬಕ್ಕೆ ತಲುಪಬೇಕಿದ್ದರೆ ಎರಡು ತಾಸುಗಳ ಪೂರ್ಣ ಪ್ರಯಾಣವಾಗುತ್ತದೆ. ಮೇಲ್ಕಂಡ ಪ್ರದೇಶದಲ್ಲಿ ಪುತ್ತೂರಿನಲ್ಲಿ ಜಗತ್ತಿನಲ್ಲಿಯೇ ಪ್ರಸಿದ್ಧವಾದ ಕೆಂಪ್ಕೋ ಚಾಕಲೇಟು ಫ್ಯಾಕ್ಟರಿ ಹಾಗೂ ರಬ್ಬರ್ ಕೃಷಿ ಹಾಗೂ ಇನ್ನಿತರ ಪ್ರಾಮುಖ್ಯ ಬೆಂಕಿ ಅಪಘಾತಕ್ಕೆ ಜಾಗರೂಕತೆಯಿಂದ ಇರಬೇಕಾದ ಕಾರ್ಖಾನೆಗಳಿವೆ. ಆದುದರಿಂದ ಸಾರ್ವಜನಿಕರ ಬೇಡಿಕೆಯನ್ನು ಈ ಹಿಂದೆಯೇ ಸದನದಲ್ಲಿ ಹಾಗೂ ಸರಕಾರದ ಗಮನಕ್ಕೆ ತಂದಿದ್ದರೂ ಕೂಡಾ ಯಾವ ರೀತಿಯ ಕ್ರಮ ಕೈಕೊಂಡಿರುವುದಿಲ್ಲ. ಆದುದರಿಂದ ಈ ಬೇಡಿಕೆಯನ್ನು ಅಂದರೆ ಪುತ್ತೂರಿನಲ್ಲಿ ಅಗ್ನಿಶಾಮಕ ದಳವನ್ನು ತೆರೆಯುವ ಬಗ್ಗೆ ಮುಖ್ಯಮಂತ್ರಿಗಳು ಕ್ರಮ ಕೈಗೊಳ್ಳಬೇಕಾಗಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಖಾತೆ ಸಚಿವರು) (ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಹಾಲಿ ಅಗ್ನಿಶಾಮಕ ಠಾಣೆಗಳನ್ನು ತೆರೆಯಲಾಗಿದ್ದು, ಜಿಲ್ಲಾ ಕೇಂದ್ರವಾದ ಉತ್ತರ ಕನ್ನಡ ಜಿಲ್ಲೆಯಲ್ಲಿ ಇನ್ನೂ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಬೇಕಾಗಿದೆ.

ಪುತ್ತೂರು, ಸುಳ್ಯ ಮತ್ತು ಬೆಳ್ತಂಗಡಿ ತಾಲ್ಲೂಕುಗಳಲ್ಲಿ ಸಂಭವಿಸುವ ಅಗ್ನಿ ಅನಾಹುತಗಳನ್ನು ಮಂಗಳೂರು ಅಗ್ನಿಶಾಮಕ ಠಾಣೆಯು ನಂದಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ರಾಜ್ಯದಲ್ಲಿ ಅಗ್ನಿಶಾಮಕ ಸೇವಾ ಚಟುವಟಿಕೆಯನ್ನು ಅಭಿವೃದ್ಧಿ ಪಡಿಸಲು ಭಾರತೀಯ ಸಾಮಾನ್ಯ ವಿಮಾ ನಿಗಮದಿಂದ ಸಾಲವನ್ನು ಪಡೆಯಲಾಗುತ್ತಿದೆ. ಒಂದು ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲು ಬೇಕಾದ ಸಿಬ್ಬಂದಿ ವಾಹನ, ಉಪಕರಣ, ಕಛೇರಿ ಮತ್ತು ಸಿಬ್ಬಂದಿ ವಸತಿ ಗೃಹ ಮುಂತಾದ ಮೆಚ್ಚಿಗೆಗಳನ್ನು ಸೇರಿಸಿದಲ್ಲಿ ಸುಮಾರು ೪೦.೦೦ ಲಕ್ಷ ರೂ.ಗಳು ಬೇಕಾಗುತ್ತದೆ.